**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.804/2020

ಸಿ.ಡಬ್ಲೂಃ 8 ಪಿ.ಡಬ್ಲೂಃ 2

ಹೆಸರುಃ ವಿನಾಯಕ

ತಂದೆಯ ಹೆಸರುಃ ಮಲ್ಲನಗೌಡ ಜಕ್ಕನಗೌಡ್ರ

ವಯಸ್ಸುಃ 32 ವರ್ಷ

ಉದ್ಯೋಗಃ ಚಾಲಕ

ವಿಳಾಸಃ ರೋಣ , ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 30-03-2023 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

1. ಚಾಸಾ 1 ನನ್ನ ಕಾಕಾ. 1 ನೇ ಆರೋಪಿ ನನ್ನ ಕಾಕಾನ ಮಗ. 2 ನೇ ಆರೋಪಿ 1 ನೇ ಆರೋಪಿಯ ತಾಯಿ. ದಿಃ 16/05/2020 ರಂದು ಸಂಜೆ 6-00 ಗಂಟೆಗೆ ನನ್ನ ಕಾಕಾ ಶೇಖರಗೌಡ ಜಕ್ಕನಗೌಡ್ರ ಇವರ ಮನೆಯ ಮುಂದೆ ಗಲಾಟೆ ಆಗಿತ್ತು. ಆರೋಪಿತರು ನಮಗೆ ಎಲ್ಲಾ ಹೊಲಗಳಲ್ಲಿ ಪಾಲು ಕೊಡ್ರಿ ಎಂದು ತಕರಾರು ಮಾಡುತ್ತಿದ್ದರು. ಆಗ ಶಿವನಗೌಡ ಎಲ್ಲಾ ಹೊಲಗಳಲ್ಲಿ ಪಾಲು ಮಾಡಿದರೆ, ತುಂಡು ಆಗುತ್ತಂದೆ, ಒಬ್ಬೊಬ್ಬರು ಒಂದು ಹೊಲ ತೆಗೆದುಕೊಳ್ಳಿ ಎಂದು ಅವರಿಗೆ ಬುದ್ಧಿ ಹೇಳಿದರು. ಆ ಸಮಯದಲ್ಲಿ ನಾನು, ಅನ್ನಪ್ಪ ನವಲಗುಂದ, ಖಾದಿರಸಾಬ ಮುಲ್ಲಾ, ವೀರುಪಾಕ್ಷಪ್ಪ ಶಿರೋಳ, ಶೇಖರಗೌಡ ಜಕ್ಕನಗೌಡ್ರ, ಶಿವನಗೌಡ ಜಕ್ಕನಗೌಡ್ರ ಎಲ್ಲರೂ ಸೇರಿ ಮನೆಯಲ್ಲಿ ಕುಳಿತಿದ್ದೇವು. ಆರೋಪಿತರು ನನ್ನಕಾಕಾನಿಗೆ ಮತ್ತು ಹಿರಿಯರಿಗೆ

"ನೀವು ಎಲ್ಲಾ ದೊಡ್ಡವರಾಗಿದ್ದಿರೇನೋ ಬೊಸಡಿ ಮಕ್ಕಳಾ" ಎಂದು ಬೈದಾಡಲಿಕ್ಕೆ ಹತ್ತಿದರು. ನಮ್ಮ ಮನೆಯ ಮಗ್ಗಲಿಗೆ ಕಟ್ಟಿಗೆಯ ಅಡ್ಡ ಇದ್ದು, 1 ನೇ ಆರೋಪಿ ಅಲ್ಲಿಗೆ ಹೋಗಿ, ಉಳಿ ತೆಗೆದುಕೊಂಡು ಬಂದು, ನನ್ನ ಕಾಕಾ ( ಚಾಸಾ 1) ರವರಿಗೆ ಉಳಿಯಿಂದ ಅವರ ಭುಜದ ಬಲಗಡೆ ಹೊಡೆದ. ನಾನು ಆಗ ಬಿಡಿಸಲು ಹೋದೆ. ಆಗ 1 ನೇ ಆರೋಪಿ ಆ ಉಳಿ ತೆಗೆದುಕೊಂಡು ಬಂದು ನನ್ನ  ಕುತ್ತಿಗೆ ಗೆ ಹೊಡೆಯಲು ಬಂದ. ಆಗ ನಾನು ಅಡ್ಡಲಾಗಿ ನನ್ನ ಎಡಗೈ ಇಟ್ಟೆ ಆ ಉಳಿ ನನ್ನ ಮುಂಗೈಗೆ ಬಿತ್ತು, ರಕ್ತ ಬಹಳ ಬಂತು. ಲಕ್ಷ್ಮವ್ವ ಕಟ್ಟಿಗೆಯಿಂದ ನನ್ನ ತೊಡೆ ಮತ್ತು ಬೆನ್ನಿಗೆ ಮತ್ತು ಕಾಲಿಗೆ ಬಡೆದರು. ರಕ್ತ ಬಹಳಷ್ಟು ಹೋಗುತ್ತಿತ್ತು, ನಾನು ಚೀರಾಡುತ್ತಿದೆ. ಆಗ ನನ್ನ ಹೆಂಡತಿ ಗಾಯತ್ರಿ, ವೀರುಪಾಕ್ಷಪ್ಪ, ಖಾದಿರಸಾಬ, ಸಂತೋಷ ಜಕ್ಕನಗೌಡ್ರ , ವಿಜಯ ಶಿರೋಳ, ಬಂದು ಜಗಳ ಬಿಡಿಸಿದರು. ಇವರು ಬಂದು ಈ ದಿನ ಜಗಳ ಬಿಡಿಸಿದ್ದಾರೆ ಎಂದು "ನೀವು ಬದುಕಿಕೊಂಡಿದ್ದೀರಿ ಇಲ್ಲವಾದರೇ, ನಿಮ್ಮ ಪ್ರಾಣ ತೆಗೆಯುತ್ತಿದ್ದೆವು" ಎಂದು ಆರೋಪಿತರು ನಮಗೆ ಜೀವದ ಬೆದರಿಕೆ ಹಾಕಿದರು.  ಆರೋಪಿತರು ನನ್ನನ್ನು ಮತ್ತು ಚಾಸಾ 1 ರವರನ್ನು ಎಲ್ಲಿದ್ದರೂ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು. ಆಗ ನನ್ನ ಹೆಂಡತಿ ಗಾಯತ್ರಿ ಸಂತೋಷ ಜಕ್ಕನಗೌಡ್ರ , ವಿಜಯ ಶಿರೋಳ, ನಮ್ಮನ್ನು ಖಾಸಗಿ ವಾಹನದಲ್ಲಿ ರೋಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ಅಲ್ಲಿ ವೈದ್ಯರು ರಕ್ತ ಸೋರುವಿಕೆಗೆ ಬ್ಯಾಂಡೆಜ ಹಾಕಿದರು. ನಂತರ ರಕ್ತ ಸೋರುವುದು ನಿಲ್ಲದೇ ಇರದ ಕಾರಣ 108 ಆ್ಯಂಬುಲೆನ್ಸ ವಾಹನದಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು

ಹೋದರು. ಆ ಸಮಯದಲ್ಲಿ ವಿಜಯ ನನ್ನ ಮುಂಗೈ ರಕ್ತ ಸೋರುತ್ತಿದ್ದನ್ನು ವಿಡಿಯೋ ಸಹ ಮಾಡಿರುತ್ತಾನೆ. ಗದಗ ಜಿಲ್ಲಾ ಆಸ್ಪತ್ರೆಯಲ್ಲಿ 2 ದಿನ ಅಡ್ಮಿಟ್ ಇದ್ದು, ಕೈ ಗೆ ಸಾಕಷ್ಟು ಡ್ಯಾಮೇಜ ಆಗಿದ್ದೆ, ಪ್ಲಾಸ್ಟಿಕ ಸರ್ಜರಿ ಮಾಡಬೇಕು ನೀವು, ಹೆಚ್ಚಿನ ಚಿಕಿತ್ಸೆ ದೊಡ್ಡ ಆಸ್ಪತ್ರೆಗೆಹೋಗಿ ಎಂದು ಹೇಳಿದರು. ನಂತರ ನಾನು, ನನ್ನ ಹೆಂಡತಿ ಗಾಯತ್ರಿ, ಸಂತೋಷ ಜಕ್ಕನಗೌಡ್ರ , ವಿಜಯ ಶಿರೋಳ ಇವರು ಎಲ್ಲರೂ ಸೇರಿ, ಬಳ್ಳಾರಿ ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ 4-5 ದಿನಗಳ ನಂತರ ಆಪರೇಷನ ಮಾಡಿದರು. ಅಲ್ಲಿಂದ ದಿಃ 31/05/2020 ರಂದು ಡಿಸ್ಚಾರ್ಜ ಆಯಿತು. ನಂತರ ವಾಪಾಸ್ಸು ರೋಣಕ್ಕೆ ಬಂದೆ. ನಂತರ ದಿಃ 04/06/2020 ರಂದು ರೋಣ ಪೊಲೀಸ ಠಾಣೆಗೆ ಬಂದೆ. ಪೊಲೀಸರು ನನ್ನ ವಿಚಾರಣೆ ಮಾಡಿ, ನನ್ನ ಹೇಳಿಕೆ ಪಡೆದಿರುತ್ತಾರೆ. ಈಗಲೂ ಸಹ ಆರೋಪಿತರು ನನ್ನ ಹೆಂಡತಿ ಮತ್ತು ನನಗೆ ಮತ್ತು ನನ್ನ ಮಕ್ಕಳಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಇವತ್ತು ಸಹ ಆರೋಪಿತರು ನನಗೆ ನ್ಯಾಯಾಲಯದಲ್ಲಿ ಜೀವದ ಬೆದರಿಕೆ ಹಾಕಿರುತ್ತಾರೆ.

**ಪಾಟೀ ಸವಾಲುಃ-ಆರೋಪಿ ಪರ ವಕೀಲರು ಸಮಯ ಕೇಳುತ್ತಿದ್ದು , ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**